೬

# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 825 |
| ಸದಸ್ಯರ ಹೆಸರು | ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 19.08.2025 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು. |

| ಕ್ರ. ಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ | ಕೊಡಗು ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕ್ರಷರ್‌ಗಳ ಸಂಖ್ಯೆ ಎಷ್ಟು; | ಕೊಡಗು ಜಿಲ್ಲೆಯಲ್ಲಿ 14 ಸ್ಟೋನ್ ಕ್ರಷರ್‌ಗಳಿಗೆ ಲೈಸೆನ್ಸ್‌ಗಳನ್ನು ನೀಡಲಾಗಿರುತ್ತದೆ. |
| ಆ | ಹೊಸ ಕ್ರಷರ್‌ಗಳನ್ನು ಸ್ಥಾಪಿಸಲು ಇರುವ ಮಾನದಂಡ ಮತ್ತು ಪ್ರಕ್ರಿಯೆಗಳೇನು; | • ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣಾ ಅಧಿನಿಯಮ 2011 ಹಾಗೂ ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣಾ ನಿಯಮಾವಳಿ 2012ರಂತೆ ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸಿಂಗ್ ಮತ್ತು ನಿಯಂತ್ರಣಾ ಪ್ರಾಧಿಕಾರಕ್ಕೆ ಕ್ರಷರ್ ಘಟಕಗಳನ್ನು ಸ್ಥಾಪಿಸಲು ಪರವಾನಿಗೆ ನೀಡುವ ಅಧಿಕಾರ ಪ್ರತ್ಯಾಯೋಜಿಸಲಾಗಿದೆ.<br><br>• ಅದರಂತೆ ಸ್ಟೋನ್ ಕ್ರಷರ್ ಘಟಕಗಳ ಸ್ಥಾಪನೆಗಾಗಿ ಸುರಕ್ಷಿತ ವಲಯ ಘೋಷಣೆ ಕೋರಿ ಅರ್ಜಿ ಸಲ್ಲಿಕೆಯಾದ ಪ್ರದೇಶವನ್ನು ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣಾ ಅಧಿನಿಯಮ, 2011ರ ಕಲಂ 6(3)ರಂತೆ ಕಂದಾಯ, ಅರಣ್ಯ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಹಾಗೂ ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣಾ ಮಂಡಳಿ ಅಧಿಕಾರಿಗಳು ಜಂಟಿ ಸ್ಥಳ ಪರಿಶೀಲನೆ ನಡೆಸಿ ಕಲಂ, 6 ರಲ್ಲಿನ ಎಲ್ಲಾ ಷರತ್ತುಗಳು ಪಾಲನೆಯಾದಲ್ಲಿ ವರದಿ ನೀಡಿದ ನಂತರ ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸಿಂಗ್ ಮತ್ತು ನಿಯಂತ್ರಣಾ ಪ್ರಾಧಿಕಾರದಿಂದ ಅರ್ಜಿತ ಪ್ರದೇಶವನ್ನು ಕ್ರಷರ್ ಸುರಕ್ಷಿತ ವಲಯವೆಂದು ಘೋಷಿಸಿ ಅಧಿಸೂಚನೆ ಹೊರಡಿಸಿ, ನಮೂನೆ ಬಿ1 ರಲ್ಲಿ ಅನುಪಾಲನಾ ಪ್ರಮಾಣ ಪತ್ರ ನೀಡಲಾಗುವುದು. ಅರ್ಜಿದಾರರು, ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣಾ ಮಂಡಳಿಯಿಂದ CFE (consent for establishment) ಹಾಗೂ CFO (consent for operation) ಪಡೆದು ಸಲ್ಲಿಸಿದ ನಂತರ ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸಿಂಗ್ ಮತ್ತು ನಿಯಂತ್ರಣಾ ಪ್ರಾಧಿಕಾರದಿಂದ ಫಾರಂ-ಸಿ ರಲ್ಲಿ ಸ್ಟೋನ್ ಕ್ರಷರ್ ಗಳಿಗೆ ಲೈಸೆನ್ಸ್ ಗಳನ್ನು ನೀಡಲಾಗಿರುತ್ತದೆ.<br><br>ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ ಅಧಿನಿಯಮ-2011ರ ಕಲಂ-6 ರಂತೆ ಸುರಕ್ಷಿತ ವಲಯ ಘೋಷಣೆಗೆ ಇರುವ ಷರತ್ತುಗಳು: -<br>1. ಕ್ರಷರ್ ಸುರಕ್ಷಿತ ವಲಯವು ರಾಷ್ಟ್ರೀಯ ಹೆದ್ದಾರಿ/ರಾಜ್ಯ ಹೆದ್ದಾರಿಯಿಂದ 200 ಮೀಟರ್ ಅಂತರ ಇರತಕ್ಕದ್ದು.<br>2. ಜಿಲ್ಲಾ ಮುಖ್ಯ ರಸ್ತೆಗಳಿಂದ 100 ಮೀಟರ್ ಹಾಗೂ ಇತರೆ ರಸ್ತೆಗಳಿಂದ 50 ಮೀಟರ್ ಅಂತರ ಇರತಕ್ಕದ್ದು.<br>3. ಗ್ರಾಮ, ಶಾಲೆ, ದೇವಸ್ಥಾನಗಳಿಂದ 500 ಮೀಟರ್. ಅಂತರ |

| | | |
|---|---|---|
| | | ಇರತಕ್ಕದ್ದು.<br>4. ನಗರ ಸಭೆ, ಪುರಸಭೆ ಮತ್ತು ಮಹಾನಗರ ಪಾಲಿಕೆಗಳ ವ್ಯಾಪ್ತಿಯಿಂದ ಹೊರಗೆ ಇರತಕ್ಕದ್ದು. |
| ಇ | ಜನವಸತಿ ಪ್ರದೇಶಗಳಿಂದ ಎಷ್ಟು ಮೀಟರ್‌ಗಳ ಅಂತರ ದಲ್ಲಿ ಕ್ರಷರ್‌ಗಳ ಸ್ಥಾಪನೆಗೆ ಅವಕಾಶ ಕಲ್ಪಿಸಲಾಗಿದೆ. | ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ ನಿಯಂತ್ರಣ ಅಧಿನಿಯಮ, 2011ರ ಕಾಯ್ದೆ ಜಾರಿಗೆ ಬಂದ ದಿನಾಂಕದಿಂದ ಸ್ಟೋನ್ ಕ್ರಷರ್ ಘಟಕ ಸ್ಥಾಪಿಸುವ ಸುರಕ್ಷಿತ ವಲಯವು ಜನವಸತಿ ಪ್ರದೇಶಗಳಾದ ಗ್ರಾಮ, ಶಾಲೆ, ದೇವಸ್ಥಾನಗಳಿಂದ 500 ಮೀಟರ್ ಅಂತರದಲ್ಲಿ ಇರಬೇಕಾಗಿರುತ್ತದೆ. ನಗರ ಸಭೆ, ಪುರಸಭೆ ಮತ್ತು ಮಹಾನಗರ ಪಾಲಿಕೆಗಳ ವ್ಯಾಪ್ತಿಯಿಂದ ಹೊರಗೆ ಮಾತ್ರ ಸ್ಟೋನ್ ಕ್ರಷರ್ ಘಟಕ ಸ್ಥಾಪಿಸುವ ಸುರಕ್ಷಿತ ವಲಯ ಸ್ಥಾಪನೆಗೆ ಮಾತ್ರ ಅವಕಾಶವಿರುತ್ತದೆ. |
| ಈ | ಈ ಹಿಂದೆ ಜನವಸತಿ ಪ್ರದೇಶಗಳಿಂದ 250 ಮೀಟರ್‌ಗಳ ಅಂತರದಲ್ಲಿ ಕ್ರಷರ್‌ಗಳ ಕಾರ್ಯನಿರ್ವಹಣೆಗೆ ಅವಕಾಶ ನೀಡಿ ಪ್ರಸ್ತುತ ಅದನ್ನು 500 ಮೀಟರ್‌ಗಳವರೆಗೆ ಹೆಚ್ಚಿಸಿ ಬದಲಿಸಲು ಕಾರಣವೇನು; | |
| ಉ | ಪ್ರಸ್ತುತ ತಂತ್ರಜ್ಞಾನಗಳಿಂದ ಜನವಸತಿ ಪ್ರದೇಶಗಳಿಗೆ 250 ಮೀಟರ್ ಅಂತರದಲ್ಲಿ ಕ್ರಷರ್ ಗಳು ಕಾರ್ಯನಿರ್ವಹಿಸಲು ಯಾವುದೇ ತೊಂದರೆಗಳು ಉಂಟಾಗದಿರುವುದರಿಂದ ಸದರಿ ಅಂತರವನ್ನು 500 ಮೀಟರ್‌ಗಳಿಂದ 250 ಮೀಟರ್ ಅಂತರದವರೆಗೆ ಇಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? | ಈ ಕುರಿತು ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ. |

ಸಂಖ್ಯೆ ಸಿಐ -ಎಂಎಂಎನ್/217/2025

**(ಎಸ್.ಎಸ್.ಮಲ್ಲಿಕಾರ್ಜುನ)**
ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು.